ದಿನಾಂಕಃ 07.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ.ವಿ.ಜಿ. ವಕೀಲರಿಂದ ಶ್ರೀ ಜಿ.ಬಿ.ವಿ. ವಕೀಲರ ಪರವಾಗಿಃ**

ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಸರ್ವೇಯನ್ನು ಮಾಡಿಸಲು ಯಾವುದೇ ತೊಂದರೆ ಇರಲಿಲ್ಲ. ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ದಾವಾ ಸ್ವತ್ತಿನ ಗಡಿಯ ಸ್ವತ್ತುಗಳ ಬಗ್ಗೆ ವಿಚಾರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಬೆಂಗಳೂರಿನಲ್ಲಿ ಇದ್ದ ಕಾರಣ ಪಹಣಿಯನ್ನು ನೋಡಿ ಸ್ವತ್ತನ್ನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕೃಷಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಅವುಗಳ ಸರ್ವೇ ಮಾಡಿಸಬೇಕು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನಗೆ ಸ್ವತ್ತನ್ನು ಖರೀದಿಸುವಾಗ ಯಾವ ಸ್ವತ್ತನ್ನು ಖರೀದಿಸುತ್ತಿದ್ದೇನೆ ಎಂದು ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಪಹಣಿಯನ್ನು ನೋಡಿ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ವಿಸ್ತೀರ್ಣವು 2 ಎಕರೆ ಇರುತ್ತದೆ. ಅದರ ಚೆಕ್ಕುಬಂದಿಯ ಬಾಬ್ತು ದಾಖಲಾತಿಯನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ಪ್ರಸ್ತುತ ದಾವಾವನ್ನು ದಾಖಲು ಮಾಡಿದ ನಂತರದಲ್ಲಿ ದಾವಾ ಸ್ವತ್ತಿನಲ್ಲಿ ಶೆಡ್ ನ್ನು ನಿರ್ಮಿಸಿರುವ ಬಾಬ್ತು ಒಂದು ಫೋಟೋವನ್ನು ಹಾಜರುಮಾಡಿರುತ್ತೇನೆ. ನಾನು ಸ್ವತ್ತಿನ ಸಂಬಂಧ ಯಾವುದೇ ಫೋಟೋವನ್ನು ಹಾಜರು ಮಾಡಿರುವುದಿಲ್ಲ ಮತ್ತು ನಾನು ಹಾಜರುಪಡಿಸಿರುವ ಫೋಟೋವನ್ನು ಈ ಪ್ರಕಣಕ್ಕಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಭಂಧಿದಂತೆ ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುವ ನಕಾಶೆಯನ್ನು ಈ ಪ್ರಕಣಕ್ಕಾಗಿ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಕಾಶೆಯಲ್ಲಿ ದಾವಾ ಸ್ವತ್ತನ್ನು ಯಾರು ಎಷ್ಟು ವಿಸ್ತೀರ್ಣವನ್ನು ಒತ್ತುವರಿ ಮಾಡಿರುತ್ತಾರೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಒತ್ತುವರಿ ಮಾಡಿರುವ ಬಗ್ಗೆ ಹದ್ದುಬಸ್ತಿಗೆ ಅರ್ಜಿಯನ್ನು ಸಲ್ಲಿಸಿದ ಸಮಯದಲ್ಲಿ ತಿಳಿದು ಬಂದಿರುತ್ತದೆ. ಸದರಿ ಅರ್ಜಿಯನ್ನು ಸಲ್ಲಿಸಿದ ದಿನಾಂಕ ನನಗೆ ನೆನಪಾಗುತ್ತಿಲ್ಲ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರಬಹುದು. ನಾನು ಕೇವಲು ಒಂದು ಬಾರಿ ಹದ್ದುಬಸ್ತಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸಾಮಾನ್ಯವಾಗಿ ಸರ್ವೇಯ ಪೂರ್ವದಲ್ಲಿ ಅಕ್ಕ ಪಕ್ಕದ ಜಮೀನಿನ ಮಾಲೀಕರಿಗೆ ನೋಟೀಸನ್ನು ನೀಡಬೇಕು ಎಂದರೆ ಸರಿ. ಸದರಿ ಸಂಭಂದ ನಾನು ದಾಖಲೆಗಳನ್ನು ಹಾಜರು ಮಾಡಿರಬಹುದು. ನೋಟೀಸು ತಲುಪಿರುವ ಬಗ್ಗೆ ದಾಖಲಾತಿಗಳನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ನಾನು ಯಾವುದೇ ನೋಟೀಸನ್ನು ನೀಡದಿದ್ದರು ಈ ಪ್ರಕರಣಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು ಜಮೀನನ್ನು ಖರೀದಿಸಿದ್ದಲ್ಲಿ ಅದರ ಗಡಿ ಗುರುತನ್ನು ಗುರುತಿಸುವ ಜವಾಬ್ದಾರಿ ನಮ್ಮ ಮೇಲೆ ಇರುತ್ತದೆ ಎಂದರೆ ಸರಿ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.